**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 1/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಬಾಬುರೆಡ್ಡಿ | ಪ್ರಾ.ಸಾ.7 |
| ತಂದೆಯ/ಗಂಡನ ಹೆಸರು | : | ತಿಪ್ಪಾರೆಡ್ಡಿ | ಚಾ.ಸಾ.6 |
| ವಯಸ್ಸು | : | 62 ವರ್ಷ | |
| ಕೆಲಸ | : | ವ್ಯಾಪಾರ | ಸಾ ಪ್ರ ಬೋ |
| ವಾಸ | : | ಚಿತ್ರದುರ್ಗ | ದಿಃ21.08.2025 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಆರೋಪಿತರು ಗೊತ್ತು. ಚಾಸಾ.1 ರವರು ಗೊತ್ತು. ನನಗೆ ಹೊಳಲ್ಕೆರೆ ಟೌನಿನಲ್ಲಿ ಚಕ್ರತೀರ್ಥ ವೈನ್ ಶಾಪ್ ಇದ್ದು, 2020 ರ ಇಸವಿಯಲ್ಲಿ ಕೋವಿಡ್ ಅವಧಿಯಲ್ಲಿ ಪೊಲೀಸರು ನನಗೆ ದೂರವಾಣಿ ಕರೆ ಮಾಡಿ ನಿಮ್ಮ ವೈನ್ ಶಾಪ್‌ನ ಅಂಗಡಿಯ ಬಾಗಿಲು ತೆಗೆದಿದ್ದು, ಅಂಗಡಿಯ ಬಳಿ ಬನ್ನಿ ಎಂದು ಹೇಳಿದ್ದರು. ಬೆಳಗ್ಗೆ 8.30 ರ ಸಮಯದಲ್ಲಿ ಪೊಲೀಸರು ನನಗೆ ದೂರವಾಣಿ ಕರೆ ಮಾಡಿದ್ದರು. ನಂತರ ನಾನು ಹೊಳಲ್ಕೆರೆ ಪೊಲೀಸ್ ಠಾಣೆಗೆ ಹೋದೆನು. ಆಗ ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ನಮ್ಮ ವೈನ್‌ಶಾಪ್‌ನ ಕೆಲಸಗಾರರಾದ 2 ಮತ್ತು 3 ನೇ ಆರೋಪಿತತರು ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಇದ್ದರು. ನಾನು ಠಾಣೆಯಲ್ಲಿ 2 ಮತ್ತು 3 ನೇ ಆರೋಪಿತರನ್ನು ಕೇಳಿದಾಗ ಏನೂ ಆಗಿಲ್ಲ ಎಂದು ಹೇಳಿದರು, ಆಗ ನಾನು ವೈನ್‌ಶಾಪ್‌ನ ಬಳಿ ಹೋಗಿ ನೋಡಿದಾಗ ಅಬಕಾರಿ ಇಲಾಖೆಯವರು ನಮ್ಮ ಅಂಗಡಿಗೆ ಬೀಗವನ್ನು ಹಾಕಿಕೊಂಡು ಹೋಗಿದ್ದರು. ಈ ಕುರಿತು ತನಿಖಾಧಿಕಾರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

2. ಹೊಳಲ್ಕೆರೆ ಟೌನಿನ ಬಸ್ ನಿಲ್ದಾಣದ ಹಿಂಬಾಗದಲ್ಲಿ ಸುಮಾರು 10 ವರ್ಷಗಳಿಂದ ನಾನು ಮತ್ತು ಜಿ.ಟಿ.ಉಮೇಶ್ ಹಾಗೂ ನಾಗರತ್ನ ರವರು ಚಕ್ರತೀರ್ಥ

ವೈನ್‌ಶಾಪ್‌ನ್ನು ಪಾಲುದಾರರಾಗಿ ನಡೆಸುತ್ತಿದ್ದೇವೆ ಎಂದರೆ ಸರಿ. ಮೇಲ್ಕಂಡ ವೈನ್‌ಶಾಪ್‌ನ್ನು ನೋಡಿಕೊಳ್ಳಲು ಮತ್ತು ವೆಂಡರ್ ಕೆಲಸಕ್ಕೆ 2 ಮತ್ತು 3 ನೇ ಆರೋಪಿತರನ್ನು ನೇಮಕ ಮಾಡಿಕೊಂಡಿದ್ದೆವು ಎಂದರೆ ಸರಿ. ನಾನು ಪ್ರತಿ ದಿನ ಬಂದು ಹೋಗುವುದು ಮಾಡುತ್ತಿದ್ದೆನು ಎಂದರೆ ಸಾಕ್ಷಿ ವಾರಕ್ಕೊಮ್ಮೆ ಬರುತ್ತಿದ್ದೆನು ಎಂದು ಹೇಳುತ್ತಾರೆ. ರಾತ್ರಿಯ ವೇಳೆಯಲ್ಲಿ ನಾನು ಹೋಗುವಾಗ ನಮ್ಮ ವೈನ್‌ಶಾಪ್‌ನ ಒಂದು ಕೀಯನ್ನು ನಾನು ತೆಗೆದುಕೊಂಡು ಹೋಗುತ್ತಿದ್ದೆನು, ಹಾಗೂ ಮತ್ತೊಂದು ಕೀ ನ್ನು 2 ನೇ ಆರೋಪಿತರ ಬಳಿ ಕೊಟ್ಟು ಹೋಗುತ್ತಿದ್ದೆನು ಎಂದರೆ ಸರಿ. ಕೋವಿಡ್ 19 ಸೋಂಕು ಹರಡುತ್ತಿದ್ದರಿಂದ ಮಾನ್ಯ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ರವರು ಸರ್ಕಾರದ ಆಧೇಶದ ಅನ್ವಯ ಲಾಕ್‌ಡೌನ್ ಮಾಡಿದ್ದು, ಅದರಂತೆ ಅಬಕಾರಿ ಇಲಾಖೆಯವರು ನಮಗೆ ಸೇರಿದ ವೈನ್‌ಶಾಪ್‌ಗೆ ದಿನಾಂಕ 22.03.2020 ರಂದು ಬೀಗ ಹಾಕಿಸಿ ಸೀಲು ಮಾಡಿಕೊಂಡು ಕೀ ಕೊಟ್ಟಿದ್ದರು ಎಂದರೆ ಸಾಕ್ಷಿ ಬೀಗ ಹಾಕಿಸಿ ಸೀಲು ಹಾಕಿದ್ದರು ಎಂದು ಹೇಳುತ್ತಾರೆ. ಅಂದಿನಿಂದ ನಮ್ಮ ವೈನ್‌ಶಾಪ್‌ನಲ್ಲಿ ಯಾವುದೇ ವ್ಯವಹಾರಗಳು ನಡೆದಿರುವುದಿಲ್ಲ ಎಂದರೆ ಸರಿ. ದಿನಾಂಕ 27.03.2020 ರಂದು ಬೆಳಗ್ಗೆ ಹೊಳಲ್ಕೆರೆಯಿಂದ ನನ್ನ ಸ್ನೇಹಿತರು ನನಗೆ ದೂರವಾಣಿ ಕರೆ ಮಾಡಿ ನಿಮ್ಮ ಚಕ್ರತೀರ್ಥ ವೈನ್‌ಶಾಪ್‌ನ ಸೀಲು ಮಾಡಿರುವ ಬೀಗವನ್ನು ದಿನಾಂಕ 26.03.2020 ರಂದು ರಾತ್ರಿ ಸಮಯದಲ್ಲಿ ಮೇಲ್ಕಂಡ ನಿಮ್ಮ ವೈನ್ ಶಾಪ್‌ನ ವೆಂಡರ್ ಹುಡುಗರು ತೆಗೆದಿದ್ದು, ಹೊಳಲ್ಕೆರೆ ಪೊಲೀಸರು ನಿಮ್ಮ ವೆಂಡರ್ ಹುಡುಗರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ತಿಳಿಸಿದರು ಎಂದರೆ ಸಾಕ್ಷಿ ಪೊಲೀಸರು ತಿಳಿಸಿದರು ಎಂದು ಹೇಳುತ್ತಾರೆ. ನಾನು ಕೂಡಲೆ ಚಿತ್ರದುರ್ಗದಿಂದ ಹೊರಟು ಹೊಳಲ್ಕೆರೆ ಪೊಲೀಸ್ ಠಾಣೆಗೆ ಬಂದು ವಿಚಾರ ಮಾಡಲಾಗಿ 2 ಮತ್ತು 3 ನೇ ಆರೋಪಿತರು 1 ನೇ ಆರೋಪಿತನೊಂದಿಗೆ ಸೇರಿಕೊಂಡು ಅಬಕಾರಿ ಇಲಾಖೆಯವರು ಸೀಲು ಮಾಡಿರುವ ವೈನ್‌ಶಾಪ್‌ನ ಬೀಗವನ್ನು 2 ನೇ ಆರೋಪಿತನ ಕಡೆಯಿಂದ ಮತ್ತೊಂದು ಕೀಯನ್ನು ಬಳಸಿ ಒಳಗಡೆ ಹೋಗಿ ಮಧ್ಯ ತುಂಬಿರುವ ಬಾಕ್ಸ್‌ನ್ನು ನಮಗೆ ತಿಳಿಯದ ಹಾಗೆ ಹೆಚ್ಚಿನ ಹಣಕ್ಕೆ ಮಧ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ದಿನಾಂಕ 26.03.2020 ರಂದು ರಾತ್ರಿ 11 ಗಂಟೆ ಸುಮಾರಿಗೆ 1 ನೇ ಆರೋಪಿತನು ತಂದಿದ್ದ ಕೆ.ಎ.16/ಡಿ-1353 ರ ಕಾರಿನಲ್ಲಿ ಸ್ವಲ್ಪ ಮಧ್ಯ ತುಂಬಿದ್ದ ಬಾಕ್ಸ್‌ಗಳನ್ನು ಇಟ್ಟಿದ್ದರು ಎಂದು ತಿಳಿಯಿತು ಎಂದರೆ ಸರಿಯಲ್ಲ. ಆರೋಪಿತರು ಇನ್ನೂ ಮಧ್ಯವನ್ನು ಸಾಗಿಸಲು ಪ್ರಯತ್ನಿಸುತ್ತಿದ್ದಾಗ ರಾತ್ರಿ 11.30 ರ ಸಮಯದಲ್ಲಿ ಪೊಲೀಸ್ ಜೀಪು ಬಸ್ ನಿಲ್ದಾಣದ ಕಡೆದ ಬಂದಿದ್ದನ್ನು ಗಮನಿಸಿ 1 ನೇ ಆರೋಪಿತನು ತನ್ನ ಕಾರಿನಲ್ಲಿ ಸ್ವಲ್ಪ ಮಧ್ಯ ತೆಗೆದುಕೊಂಡು ಆಮೇಲೆ ಬರುತ್ತೇನೆ ಎಂದು ಹೇಳಿದನು ಎಂದು ತಿಳಿಯಿತು ಎಂದರೆ ಸರಿಯಲ್ಲ. ಸ್ವಲ್ಪ ಸಮಯದ ನಂತರ ನಮ್ಮ ವೈನ್‌ಶಾಪ್‌ನಲ್ಲಿ ಇದ್ದ 2 ಮತ್ತು 3 ನೇ ಆರೋಪಿತರನ್ನು ಹೊಳಲ್ಕೆರೆ ಪೊಲೀಸ್ ಠಾಣೆಯ ಪಿ.ಎಸ್.ಐ. ಮತ್ತು ಸಿಬ್ಬಂಧಿಗಳು

ಹಾಗೂ ಹೊಳಲ್ಕೆರೆಯ ತಾಲ್ಲೂಕು ತಹಶಿಲ್ದಾರ್ ಹಾಗೂ ಹೊಳಲ್ಕೆರೆಯ ಅಬಕಾರಿ ನಿರೀಕ್ಷಕರು ಮತ್ತು ಅವರ ಸಿಬ್ಬಂಧಿ ಠಾಣೆಗೆ ಕರೆದುಕೊಂಡು ಬಂದಿರುತ್ತಾರೆ ಎಂದು ತಿಳಿಯಿತು ಎಂದರೆ ಸರಿಯಲ್ಲ. 1 ನೇ ಆರೋಪಿತನು 2 ಮತ್ತು 3 ನೇ ಆರೋಪಿತರಿಗೆ ಬಲವಂತವಾಗಿ ನಿಮ್ಮ ಮಾಲೀಕರಿಗೆ ಹೇಳಿರುತ್ತೇನೆ ಎಂದು ಹೆದರಿಸಿ ಅವರನ್ನು ತನ್ನ ಸಂಗಡ ಸೇರಿಸಿಕೊಂಡು ಕೋವಿಡ್ 19 ಪ್ರಯುಕ್ತ ಅಬಕಾರಿ ಇಲಾಖೆಯವರು ಮಾಡಿರುವ ಸೀಲನ್ನು ಕಿತ್ತುಹಾಕಿ 2 ಮತ್ತು 3 ನೇ ಆರೋಪಿತರ ಬಳಿ ಇದ್ದ ಕೀಯನ್ನು ಬಳಸಿಕೊಂಡು 1 ನೇ ಆರೋಪಿತನು ಕಳ್ಳತನದಿಂದ ಮದ್ಯವನ್ನು ಸಾಗಣೆ ಮಾಡಿರುತ್ತಾನೆ ಎಂದು ತಿಳಿಯಿತು ಎಂದರೆ ಸರಿಯಲ್ಲ. 1 ನೇ ಆರೋಪಿತನು 2 ಮತ್ತು 3 ನೇ ಆರೋಪಿತರ ಸಹಾಯದಿಂದ ಕದ್ದುಕೊಂಡು ಸಾಗಣೆ ಮಾಡಿದ್ದ ಮದ್ಯವನ್ನು ಪೊಲೀಸರೊಂದಿಗೆ ಸಿಕ್ಕಿಹಾಕಿಕೊಳ್ಳುತ್ತೇನೆ ಎಂದು ಕಾರಿನಲ್ಲಿ ಎಲ್ಲಿಯೋ ತೆಗೆದುಕೊಂಡು ಹೋಗಿ ಸುಟ್ಟುಹಾಕಿ ನಾಶಪಡಿಸಿರುತ್ತಾನೆ ಎಂದು ತಿಳಿಯಿತು ಎಂದರೆ ಸರಿಯಲ್ಲ. ನಾನಾಗಲೀ, ನನ್ನ ಸಹ ಮಾಲೀಕರಾಗಲೇ 1 ನೇ ಆರೋಪಿತನಿಗೆ ಮದ್ಯವನ್ನು ತೆಗೆದುಕೊಳ್ಳುವಂತೆ ಯಾವುದೇ ರೀತಿ ಮಾತನಾಡಿರುವುದಿಲ್ಲ ಎಂದರೆ ಸರಿ. ನಾನು ಪೊಲೀಸರ ವಶದಲ್ಲಿದ್ದ 1 ರಿಂದ 3 ನೇ ಆರೋಪಿತರನ್ನು ನೋಡಿರುತ್ತೇನೆ ಎಂದರೆ ಸಾಕ್ಷಿ 2 ಮತ್ತು 3 ನೇ ಆರೋಪಿತರನ್ನು ಮಾತ್ರ ನೋಡಿರುತ್ತೇನೆ ಎಂದು ಹೇಳುತ್ತಾರೆ. ಈ ಕುರಿತು ನಾನು ತನಿಖಾಧಿಕಾರಿಗೆ ದಿನಾಂಕ 27.03.2020 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ.10 ಎಂದು ಗುರುತಿಸಲಾಯಿತು. 2 ಮತ್ತು 3 ನೇ ಆರೋಪಿತರು ನನ್ನ ಬಳಿ ಕೆಲಸಗಾರರಾಗಿ ಕೆಲಸ ಮಾಡುತ್ತಿದ್ದು, ಹಾಗಾಗಿ ಅವರನ್ನು ರಕ್ಷಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಡಿ.ಎಂ.ಬಿ ವಕೀಲರಿಂದಃ</u>**

3. 2 ಮತ್ತು 3 ನೇ ಆರೋಪಿತರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಕೂರಿಸಿಕೊಂಡಿದ್ದು, ನಾನು ಠಾಣೆಗೆ ಹೋಗಿ ವಿಚಾರಿಸಿದಾಗ ಪೊಲೀಸರು ಆರೋಪಿತರು ನಮ್ಮ ಮದ್ಯದ ಅಂಗಡಿಯಲ್ಲಿ ಮದ್ಯವನ್ನು ಕಳ್ಳತನ ಮಾಡಿದ್ದಾರೆ ಎಂಬ ಬಗ್ಗೆ ನನಗೆ ತಿಳಿಸಿಲ್ಲ. ನಮ್ಮ ಅಂಗಡಿಯಲ್ಲಿ ಪ್ರತಿದಿನದ ವಹಿವಾಟಿನ ಕುರಿತು ಲೆಡ್ಜರ್ ಎಕ್ಸ್‌ಟ್ರಾಕ್ಟ್ ಇರುತ್ತದೆ ಎಂದರೆ ಸರಿ. ಅಬಕಾರಿ ಇಲಾಖೆಯವರು ಕೋವಿಡ್ 19 ಕಾರಣದಿಂದ ನಮ್ಮ ಅಂಗಡಿಗೆ ಸೀಲು ಹಾಕುವ ಪೂರ್ವದಲ್ಲಿ ನಮ್ಮ ಅಂಗಡಿಯಲ್ಲಿ ಇದ್ದಂತಹ ಮದ್ಯದ ಪ್ರಮಾಣದ ಕುರಿತು ಲೆಕ್ಕ ಇರುತ್ತದೆ. ಕೋವಿಡ್ 19 ಸಮಯದಲ್ಲಿ ಅಬಕಾರಿ ಇಲಾಖೆಯವರು ಸೀಲು ಹಾಕುವ ಪೂರ್ವದಲ್ಲಿ ಇದ್ದಂತಹ ಮದ್ಯದ ಮಾಲು ಹಾಗೂ

ಪ್ರಮಾಣ ಕೋವಿಡ್ 19 ನಂತರದಲ್ಲಿ ನಾವು ಅಂಗಡಿಯ ಬಾಗಿಲನ್ನು ತೆಗೆದು ಪರಿಶೀಲಿಸಿದಾಗ ಅಷ್ಟೆ ಪ್ರಮಾಣದಲ್ಲಿ ಇತ್ತು.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಳಲ್ಕೆರೆ